ಶ್ರೀ ಆರ್.ವಿ. ದೇಶಪಾಂಡೆ: ಅವರು ಹೇಳಿದ ಹಾಗೆ, ಯಾರು ತಪ್ಪು, ನಿರ್ಲಕ್ಷ್ಯತನ ಮಾಡುವ ಅಧಿಕಾರಿಗಳಿರುತ್ತಾರೆ, ನಮ್ಮ ಸರ್ಕಾರ ಅಂಥವರನ್ನು ಪ್ರೊಟೆಕ್ಟ್ ಮಾಡುವುದಿಲ್ಲ. ಆಲ್ಲಿನ ಸಿಎಂಡಿಯವರು ತೀರ್ಥಹಳ್ಳಿಗೆ ಕರ್ತವ್ಯದ ಮೇಲೆ ಪ್ಲಾಂಟೇಷನ್ ರಿವ್ಯು ಮಾಡಲು ತೆರಳಿದ್ದರು. He has a duty to look after the plantations there.ಆಪಾದನೆ ಮಾಡುವ ಅಧಿಕಾರ ನಿಮಗೆ ಇದೆ. ಏಕೆ ಆಪಾದನೆ ಮಾಡಿದಿರಿ ಎಂದು ನಾನು ಕೇಳುವುದಿಲ್ಲ. ಹಾಗಾದರೆ, ಅವರು ಅಲ್ಲಿಂದ ಸ್ಥಳಕ್ಕೆ ಬರಲು ಸಮಯ ಬೇಡವೇ? ಆದರೂ ಅವರು ತಕ್ಷಣ ಬಂದಿದ್ದಾರೆ. ತಾವು ಹೇಳಿದ ಹಾಗೆ, ಇದರ ಬಗ್ಗೆ ಹಿರಿಯ ಅಧಿಕಾರಿಗಳಿಂದ ತನಿಖೆ ಮಾಡಿಸಿ, ಪುನಃ ನಾನು ಸದನಕ್ಕೆ ಬಂದು, ಅದರ ವರದಿಯನ್ನೊಪ್ಪಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಆ ಕಾರ್ಖಾನೆಗೆ 3ನೇ ಸಾರಿ ಬೆಂಕಿ ಬಿದ್ದಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಮೊದಲನೆ ಸಾರಿ ಬೆಂಕಿ ಬೀಳಲು ಕಾರಣವೇನು? ಎಂದು ತಿಳಿದೂ ಅದಕ್ಕೆ ಬೇಕಾದ ಮುಂಜಾಗ್ರತೆಯನ್ನು ತೆಗೆದುಕೊಳ್ಳಲಾಗಲಿಲ್ಲವೆ? ಆ ರೀತಿ ಮುಂಜಾಗ್ರತೆ ತೆಗೆದುಕೊಂಡಿದ್ದರೆ, 2-3ನೇ ಸಾರಿಯೂ ಬೆಂಕಿ ಬೀಳುತ್ತಿರಲಿಲ್ಲ. ಇದು ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಲೋಪವಲ್ಲವೆ? ಆ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ: ನನ್ನ ಮಾಹಿತಿ ಪ್ರಕಾರ, ಆ ಕಾರ್ಖಾನೆಗೆ 2ನೇ ಬಾರಿ ಬೆಂಕಿ ಬಿದ್ದಿದ್ದು, 3ನೇ ಸಾರಿ ಬಿದ್ದಿದೆ ಎಂದು ಹೇಳುತ್ತಿರುವ ಬಗ್ಗೆ ನಾನು ವೆರಿಫೈ ಮಾಡಿ ಹೇಳುತ್ತೇನೆ. ಬಗಾಸ್ ಯಾರ್ಡ್‌ಗೆ 4-5 ವರ್ಷಗಳ ಹಿಂದೆ ಒಂದು ಬಾರಿ ಬೆಂಕಿ ಬಿದ್ದಿತ್ತು. ಆದರೆ, ಬಗಾಸ್ ಎಂದರೇನು? ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಬೀಡಿ ಅಥವಾ ಸಿಗರೇಟ್ ಸೇದಿದಾಗ ಬೆಂಕಿ ಹತ್ತುತ್ತದೆ. ಎಷ್ಟು ಮುಂಜಾಗ್ರತೆ ತೆಗೆದುಕೊಳ್ಳಲು ಸಾಧ್ಯವೋ ಅಷ್ಟನ್ನೂ ತೆಗೆದುಕೊಳ್ಳುತ್ತಾರೆ. ಇನ್‌ವೆಸ್ಟಿಗೇಷನ್ ಮಾಡುತ್ತಿದ್ದು, ಅದರಲ್ಲಿ ಬೇಕಾದಷ್ಟು ಸಲಹೆ ತೆಗೆದುಕೊಳ್ಳುತ್ತೇವೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಇನ್ನೂ ಹೆಚ್ಚಿನ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸುತ್ತೇವೆ.

ವಿಷಯ: (iii) ನಗರ ಸಭೆ, ಪುರಸಭೆಗಳ ಚುನಾವಣೆ ಕುರಿತು

+ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಪ್ರಸ್ತುತ ಚುನಾಯಿತ ಸದಸ್ಯರ ಅಡಳಿತಾವಧಿ ಮುಗಿದಿದೆ. ಆದ್ದರಿಂದ, ಹೊಸದಾಗಿ ಚುನಾವಣೆ ನಡೆಸಬೇಕೆಂದು ಸರ್ಕಾರ ಹಿಂದೆಯೇ ಕ್ರಮ ತೆಗೆದುಕೊಂಡಿತ್ತು. ಸದಸ್ಯರೊಬ್ಬರು ಉಚ್ಚನ್ಯಾಯಾಲಯಕ್ಕೆ ಹೋಗಿ ಅಲ್ಲಿಂದ ತಾತ್ಕಾಲಿಕವಾಗಿ ತಡೆಯಾಯಿತು. ಈಗ ಚುನಾವಣೆ ನಡೆಸಬೇಕೆಂದು ಆದೇಶ ಕೊಟ್ಟಿದ್ದಾರೆ. ಆಯಾಯ ಕಾಲಕ್ಕೆ ಸರಿಯಾಗಿ 148 ನಗರಸಭೆಗಳಿಗೆ ಚುನಾವಣೆ ನಡೆಸಲಾಗುವುದು. ದಿನಾಂಕ 5.5.2001ರೊಳಗಾಗಿ ಚುನಾವಣೆ ನಡೆಸುವಂತೆ ಉಚ್ಚನ್ಯಾಯಾಲಯ ನಿರ್ದೇಶನ ಕೊಟ್ಟಿದ್ದರಿಂದ ಚುನಾವಣೆಗಳನ್ನು ನಡೆಸುವ ಬಗ್ಗೆ ರಾಜ್ಯದ ಚುನಾವಣಾಯುಕ್ತರು ಈಗಾಗಲೇ ಕ್ರಮ ಕೈಗೊಂಡಿದ್ದಾರೆ.

ಶ್ರೀ ಆರಗಜ್ಞಾನೇಂದ್ರ: ಚುನಾವಣೆ ನಡೆಸುತ್ತೀರಿ. ಈಗಾಗಲೇ ಅಸೈನ್‌ಮೆಂಟ್ ಆಗಿದೆ. ಕ್ಷೇತ್ರ ವಿಂಗಡಣೆಯಾಗಿ ಈಗಾಗಲೇ ತಾವು ಹೈಕೋರ್ಟಿಗೆ ಕೊಟ್ಟಿದ್ದೀರಿ. ಅದನ್ನು

ಹಾಗೆಯೇ ಇಡುತ್ತೀರೋ, ಬದಲಾಯಿಸುತ್ತೀರೋ? ಮಂತ್ರಿಗಳ ಕಛೇರಿಯ ಬಾಗಿಲಲ್ಲಿ ನಮ್ಮ ನಿಮ್ಮ ಕ್ಷೇತ್ರದ ಜನರು ಬಂದಿದ್ದಾರೆ. ಸ್ವಲ್ಪ ವ್ಯತ್ಯಾಸವಾಗಿದೆ, ಹಿಂದೆ ಸರಿ ಇತ್ತು, ನಾವು ಗೆಲ್ಲುವುದಿಲ್ಲ, ಸ್ವಲ್ಪ ಬದಲಾಯಿಸಿಕೊಡಿ ಎಂದು ಬಂದಿದ್ದಾರೆ. ಜನರಿಗೂ ಅನುಮಾನ ಬಂದಿದೆ, ಪತ್ರಿಕೆಯಲ್ಲೂ ವರದಿಯಾಗಿದೆ. ನಮಗೂ ಅನುಮಾನ ಬರುತ್ತಿದೆ. ಮತ್ತೆ, ಆ ಕ್ಷೇತ್ರಗಳ ರಿಸರ್ವೇಷನ್ ಅನ್ನು ಬದಲಾಯಿಸುತ್ತೀರೋ, ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ: ಗೈಡ್‌ಲೈನ್ಸ್ ಸರಿಯಿಲ್ಲವೆಂದು ತಾವೇ ರಿಟ್ ಹಾಕಿದ್ದಿರಿ.

ಶ್ರೀ ಡಿ.ಕೆ. ಶಿವಕುಮಾರ್(ಸಹಕಾರ ಸಚಿವರು): ನಮ್ಮ ಸ್ನೇಹಿತರಾದ ಆರಗಜ್ಞಾನೇಂದ್ರರವರು, ವಿಧಾನಸಭೆಗೆ ಬಂದು ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾರೆಂದು ನಾನು ತಿಳಿದಿದ್ದೆ. ನಿಮಗೆ ವಿಧಾನಸೌಧಕ್ಕೆ ಬಂದು, ಮಂತ್ರಿಗಳ ಕಛೇರಿ ಮುಂದೆ ಬರುವ ಜನರನ್ನು ಎಣಿಸುವ ಕೆಲಸ ಯಾರು ಕೊಟ್ಟರೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ಏಕೆ ಚಿಂತಿಸುತ್ತಿದ್ದೀರಿ. ಅದನ್ನು ಹೇಳಿ.

ಶ್ರೀ ಆರಗಜ್ಞಾನೇಂದ್ರ: ನಾವು ಎಲ್ಲವರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಯಾರ್ಯಾರು ಬರುತ್ತಾರೆಂಬುದನ್ನು ನಾವು ನೋಡದಿದ್ದರೆ ವಿರೋಧಪಕ್ಷವಾಗಿ ಇಲ್ಲಿ ಕೆಲಸ ಮಾಡಲಾಗುವುದಿಲ್ಲ. ಅವರು ಏತಕ್ಕೆ ಬರುತ್ತಾರೆಂದು ಕೇಳಿದಾಗ, ಹೇಳುತ್ತಾರೆ. ನನ್ನ ಹತ್ತಿರವೂ ಹೇಳಿದ್ದಾರೆ. ಬೆಳಿಗ್ಗೆ ಎಲ್ಲ ಸಿಕ್ಕಿದ್ದರು. ಅದು ಹಿಂದೆ ಬಹಳ ಚೆನ್ನಾಗಿತ್ತು, ನಾವೆಲ್ಲ ಹೇಳಿದ ಹಾಗೆ ಮಾಡಿದ್ದರು, ಈಗ ಹೈಕೋರ್ಟ್ ಮಧ್ಯೆ ಪ್ರವೇಶಿಸಿ, ವ್ಯತ್ಯಾಸ ಮಾಡಿ ಹಾಕಿದ್ದಾರೆ, 2-3 ಕ್ಷೇತ್ರವನ್ನು ಬದಲಾವಣೆ ಮಾಡಬೇಕಾಗಿತ್ತು ಎಂದು ಹೇಳಿದರು. ಮಂತ್ರಿಗಳು, ನೋಡೋಣವೆಂದು ತಿಳಿಸಿದ್ದಾರೆಂದೂ ಹೇಳಿದರು. ಆಮೇಲೆ ನೀವೇನು ಮಾಡುತ್ತೀರಿ ಎನ್ನುವ ಸ್ಪಷ್ಟನೆ ರಾಜ್ಯದ ಜನರಿಗೆ ಬೇಕಾಗಿದೆ. 148 ಕಡೆಗಳಲ್ಲೇನು ಚುನಾವಣೆ ನಡೆಯುತ್ತಿದೆ, ಆ ಭಾಗದ ಜನರಿಗೆ ಮೆಸೇಜ್ ಹೋಗಬೇಕಾಗಿದೆ. ನೀವು ಇದಕ್ಕೇ ಸ್ಟಿಕ್-ಆನ್ ಆಗುತ್ತಿರೋ? ಹೇಗೆ? ಮೊನ್ನೆ, ಒಂದು ದಿವಸ ಒಂದು ನೋಟಿಫಿಕೇಷನ್ ಮಾಡಿದಿರಿ. ನಿಮ್ಮಲ್ಲೇ 2-3 ಗುಂಪುಗಳು. ಅರ್ಜಿ ಕೊಡುವ ಕೊನೆಯ ದಿನವೂ ಮತ್ತೆ ವ್ಯತ್ಯಾಸವಾಯಿತು. ರಾತ್ರಿ-ಬೆಳಿಗ್ಗೆ ಪ್ರಿಟಿಂಗ್ ಪ್ರೆಸ್‌ಗೆ ಕೆಲಸಗಳು, ಎಂಪ್ಲಾಯೀಸ್ ಎಂಎಸ್ ಬಿಲ್ಡಿಂಗ್‌ನಲ್ಲಿ ರಾತ್ರಿ ಹಗಲು ಗೋಳಾಡಿದರು. ಇದರ ಬಗ್ಗೆ ನಿಮ್ಮ ಸರ್ಕಾರದ ಸ್ಪಷ್ಟ ನಿಲುವೇನೆಂಬುದನ್ನು ಬಯಸುತ್ತಿದ್ದೇನೆ.

ಶ್ರೀ ಡಿ.ವಿ. ಚಂದ್ರೇಗೌಡ: ನಾನು ಆಗ ಇಲ್ಲಿ ಹಿಂದಿ ಹೇಳಿದ್ದೆ. ಆ ಮಾನದಂಡವನ್ನು ಬಿಟ್ಟು, ಇನ್ನೇನೂ ಮಾಡುವುದಿಲ್ಲ. ಏನಾಗಿದೆ ಎಂಬ ಬಗ್ಗೆ ಕೋರ್ಟಿನಲ್ಲಿ, ಎಲೆಕ್ಷನ್ ಕಮಿಷನ್ ಮುಂದೆ ಎರಡೂ ಇವೆ. ಆದೇಶ ಕೊಟ್ಟಿದೆ, ಎಲೆಕ್ಷನ್ ಕಮಿಷನ್ ಚುನಾವಣೆ ನಡೆಸುತ್ತದೆ. ಈಗ ಸರ್ಕಾರವೇನು ಮಾಡುತ್ತದೆಂದು ಕೇಳಿದರೆ, ನಾನೇನು ಹೇಳಲಿ? ಎಲೆಕ್ಷನ್ ಕಮಿಷನ್‌ನವರನ್ನು ಕೇಳಿ.

(ಗೊಂದಲ)

ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ಮೇಲೆ, ಇದು ಚುನಾವಣೆ ಆಯೋಗಕ್ಕೆ ಸಂಬಂಧಪಟ್ಟ ವಿಚಾರವಾಗಿದ್ದು, ಇದರಲ್ಲಿ ನಾವೇನೂ ಮಧ್ಯ ಪ್ರವೇಶ ಮಾಡುವುದಿಲ್ಲ.

ಅಧ್ಯಕ್ಷರು: ಅವರು ಆಗುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಆರಗಜ್ಞಾನೇಂದ್ರ: ತಾವು ನಮ್ಮ ರಕ್ಷಣೆಗೆ ಬರಬೇಕು. ನಮಗೆ ಸ್ಪಷ್ಟನೆ ಬೇಕಾಗಿದೆ.

ಅಧ್ಯಕ್ಷರು: ಮಾನದಂಡದ ಪ್ರಕಾರ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಆರಗಜ್ಞಾನೇಂದ್ರ: ಈಗಾಗಲೇ ಹೈಕೋರ್ಟಿಗೆ ಕೊಟ್ಟಿದ್ದಾರೆ. ಈಗಾಗಲೇ ಗೆಜೆಟ್ ನೋಟಿಫಿಕೇಷನ್ ಆಗಿದೆ.

ಶ್ರೀ ಡಿ.ಕೆ. ಶಿವಕುಮಾರ್: ಹೈಕೋರ್ಟಿಗೆ ಹೋದಮೇಲೆ ನಿಮಗೆ ಚರ್ಚಿಸುವುದಕ್ಕೆ ಹಕ್ಕಿಲ್ಲ ಎಂಬುದನ್ನು ಒಪ್ಪಿಕೊಂಡು ಬಂದಿದ್ದೀರಿ. ಏನೇನಾಗುತ್ತದೆಂಬುದನ್ನು ಕಾದು ನೋಡಿ.

ಶ್ರೀ ಡಿ.ಬಿ. ಚಂದ್ರೇಗೌಡ: ಯಾವ್ಯಾವ ಸಮಸ್ಯೆಗೆ ಉತ್ತರ ಬೇಕೆಂದು ಕೇಳುತ್ತಾರೆಯೋ, ಅದನ್ನು ಕೇಳುವ ಹಕ್ಕು ಇವರಿಗೆ ಇದೆ. ಅವರು ಎಲ್ಲದಕ್ಕೂ ಕೋರ್ಟಿಗೆ ಹೋಗಿದ್ದಾರೆ. ಉತ್ತರ ಸಿಗಲಿಲ್ಲವೆಂದು ಅವರು ವಜಾ ಮಾಡಿಸಿಕೊಂಡು ಆಗಿದೆ. ಇಲ್ಲಿ ಬಂದು ನೀವೇನು ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ

ಶ್ರೀ ಎಸ್. ಸುರೇಶ್ ಕುಮಾರ್: ತಾವೇ ಒಂದು ಸಂದರ್ಭದಲ್ಲಿ doors of the courts are opened ಎಂದು ಹೇಳಿದ್ದಿರಿ, ಆದ್ದರಿಂದ ಕೋರ್ಟಿಗೆ ಹೋಗುವುದು ತಪ್ಪೇ?

ಶ್ರೀ ಡಿ.ಬಿ. ಚಂದ್ರೇಗೌಡ: ತಪ್ಪು ಎಂದು ನಾನು ಹೇಳಲಿಲ್ಲ. The courts have already closed their doors so far as your petitions are concerned. ಹಾಕಿದ ರಿಟ್ ಅರ್ಜಿಗಳೆಲ್ಲಾ ವಜಾ ಆಗಿ ಕೋರ್ಟ್ ಬಾಗಿಲು ಹಾಕಿದ ಮೇಲೆ ನೀವಿಲ್ಲಿ ಬಂದಿದ್ದೀರಿ.

4.10 ಪಿ.ಎಂ

ಶ್ರೀ ಎಸ್. ಸುರೇಶ್ ಕುಮಾರ್: ನಮ್ಮ ರಾಜ್ಯದಲ್ಲಿ ಗೈಡ್‌ಲೈನ್ಸ್ ಇಲ್ಲ ಹಾಗೆ ಎಲೆಕ್ಷನ್ ಮಾಡುತ್ತೇವೆಂದು ನೀವು ಹೊರಟುಬಿಟ್ಟೀದ್ದೀರಿ. ಆಗ ಅವರು ಬಹಳ ಚೆನ್ನಾಗಿ ತಿಳುವಳಿಕೆ ಕೊಟ್ಟರು.

ಶ್ರೀ ಡಿ.ಬಿ. ಚಂದ್ರೇಗೌಡ: ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿಯ ಬಗ್ಗೆ ಕೂಡ ಹೀಗೆ ವಾದ ಮಾಡಿದಿರಿ ಅದರೂ ಚುನಾವಣೆ ನಡೆಯಲಿಲ್ಲವೆ?

ಶ್ರೀ ಎಸ್. ಸುರೇಶ್ ಕುಮಾರ್: ಅದಕ್ಕೆ ಗೈಡ್ ಲೈನ್ಸ್ ಇತ್ತು ಇದಕ್ಕೆ ಮಾಡಿಲ್ಲವಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಈಗಲೂ ಗೈಡ್‌ಲೈನ್ಸ್ ಇದೆ ಸದನದ ಮುಂದೆನೇ 8 ಗೈಡ್‌ಲೈನ್ಸ್ ಮಾಡಿರುವುದು.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಆರಗ ಜ್ಞಾನೇಂದ್ರ ರವರ ಪ್ರಶ್ನೆಗೆ ಅವರು ಕೊಟ್ಟಿರುವ ಉತ್ತರ ನೋಡಿದರೆ ಬಹುಶಃ ಈ ಸರ್ಕಾರಕ್ಕೆ ಚುನಾವಣೆ ನಡೆಸುವುದು ಬೇಕಾಗಿಲ್ಲ,

ಪುನಃ ಇವರು ಕೋರ್ಟಿಗೆ ಹೋಗಲಿ ಎಂದು ಬದಲಾವಣೆ ಮಾಡುತ್ತಾರೆನ್ನುವ ಸಂಶಯ ನಮಗೆ ಬರುತ್ತದೆ. ಈ ಕಾರಣಕ್ಕಾಗಿ ಮಾಡುವುದಕ್ಕಾಗಿಲ್ಲವೆಂದು ಇವರು ಹೇಳಬೇಕು.

ಅಧ್ಯಕ್ಷರು: ಕೋರ್ಟಿನ ಆದೇಶದನ್ವಯ ಮಾಡಲೇಬೇಕಲ್ಲವೆ? The Government cannot avoid. They have to conduct elections.

ಶ್ರೀ ಎಸ್.ಎಸ್. ಪಾಟೀಲ್: ಈಗಾಗಲೇ ರಾಜ್ಯಪತ್ರದಲ್ಲಿ ಪ್ರಕಟಿಸಿರುವಂತೆ ಬದಲಾವಣೆ ಆಗುವುದಿಲ್ಲವೆ? ಈಗಾಗಲೇ ಪ್ರಕಟಿಸಿರುವ ರಾಜ್ಯಪತ್ರಗಳು ಎಲ್ಲಾ ಪುರಸಭೆಗಳಿಗೂ ಹೋಗಿದ್ದು ಪುನಃ ನೀವು ಆದರಲ್ಲಿ ಬದಲಾವಣೆ ಮಾಡುತ್ತೀರಾ? ಆಥವಾ ಇಲ್ಲವೆ? ಎಂಬುದನ್ನು ಹೇಳಿ.

ಅಧ್ಯಕ್ಷರು: ಉತ್ತರ ಈಗಾಗಲೇ ಹೇಳಿದ್ದರಲ್ಲಾ. ಎಷ್ಟು ಸಲ ಉತ್ತ ಕೇಳುತ್ತೀರಿ.

(ಗೊಂದಲ)

SRI D.B. CHANDRE GOWDA: They cannot force me to say as they want.

ಅಧ್ಯಕ್ಷರು: ಚುನಾವಣಾ ಆಯೋಗಕ್ಕೆ ಸಂಬಂಧಿಸಿದ್ದು ಎಂದು ಹೇಳಲಿಲ್ಲವೆ? ನಮಗೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಿದ್ದರಲ್ಲಾ....ಕೋರ್ಟಿನ ಮುಂದೆ ಹಾಕಿದ್ದಾರೆ, ಗೈಡ್‌ಲೈನ್ ಪ್ರಕಾರ ಚುನಾವಣೆಗಳು ನಡೆಯುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ನಾನು ಕೇಳಿದ್ದಕ್ಕೆ ನೇರವಾದ ಉತ್ತರ ಕೊಟ್ಟುಬಿಡಿ.

(ಗೊಂದಲ)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಕಳೆದ ಒಂದೂವರೆ ವರ್ಷದಿಂದ ನನ್ನ ಸಮಸ್ಯೆ ಏನೆಂದರೆ,

(ಗೊಂದಲ)

MR. SPEAKER: I cannot compel the Minister to answer like this or like that. ಇಂಡಿವಿಜ್ಯುಯಲ್ ಕೇಸ್ ಬೇಕಾಗಿಲ್ಲ, ಗೈಡ್ ಲೈನ್ ಪ್ರಕಾರ ಮಾಡಿದ್ದಾರೆ.

ವಿಷಯ: (iv) ಶಾಸಕರ ಭವನದಲ್ಲಿ ಶಾಸಕರುಗಳಿಗೆ ಕೊಠಡಿಗಳು ಅಲಾಟ್ ಮಾಡದಿರುವುದರಿಂದ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಒಂದೂವರೆವರ್ಷದಿಂದ ನನಗೆ ರೂಮ್ ಇಲ್ಲ, ಶಾಸಕರ ಭವನದಲ್ಲಿ ನನಗೊಂದು ರೂಮ್ ಬೇಕು ಎಂದು ಕೇಳಿದ್ದೆ. ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪಿಸಬೇಕೆಂದು ಸುಮಾರು 15 ದಿವಸಗಳಿಂದಲೂ ನಾನು ಮನವಿ ಮಾಡುತ್ತಿದ್ದು, ಇವತ್ತು ಅವಕಾಶ ಮಾಡಿದಿರಿ.